ಸರ್ವ ಶಿಕ್ಷಣ ಅಭಿಯಾನ ಯೋಜನೆ

1472(2332), ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್(ನಿಪ್ಪಾಣಿ)

ಅ) ಕಳೆದ 3 ವರ್ಷಗಳಲ್ಲಿ ಚಿಕ್ಕೋಡಿ ತಾಲ್ಲೂಕಿನ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಯಾವ ಗ್ರಾಮಗಳಲ್ಲಿ ಯಾವ ಶಾಲೆಗೆ ಎಷ್ಟು ಕೊಠಡಿಗಳು ಮಂಜೂರಾಗಿರುತ್ತವೆ; ಸದರಿ ಕಟ್ಟಡಗಳ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ;

ಆ) ಕೆಲವೊಂದು ಗ್ರಾಮಗಳಲ್ಲಿ ಈವರೆಗೂ ಕಾಮಗಾರಿಯು ಆರಂಭವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಕಾರಣಗಳೇನು;

ಇ) ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಈ) ಮುಂಬರುವ ಶೈಕ್ಷಣಿಕ ವರ್ಷಕ್ಕೆ ಈ ಯೋಜನೆಯನ್ನು ಮುಂದುವರೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಉ) ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಚಿಕ್ಕೋಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಕ್ರಿಯಾ ಯೋಜನೆಯಲ್ಲಿ ಪರಿಗಣಿಸಿದ ಶಾಲೆಗಳು ಯಾವುವು?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಚಿಕ್ಕೋಡಿ ತಾಲ್ಲೂಕಿಗೆ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.

ವರ್ಷ	ಬ್ಲಾಕ್	ಕಾಮಗಾರಿ ವಿವರ	ಒಟ್ಟು ಮಂಜೂರಾದ ಕಾಮಗಾರಿಗಳು	ಪೂರ್ಣ ಗೊಂಡಿರುವ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಪ್ರಾರಂಭವಾಗದೇ ಇರುವ ಕಾಮಗಾರಿಗಳ ಸಂಖ್ಯೆ
2011–12	ಚಿಕ್ಕೋಡಿ	ಹೆಚ್ಚುವರಿ ಕೊಠಡಿ	27	27	–	–
		ಮು.ಶಿ. ಕೊಠಡಿ	22	22	–	–
		ಬಿ.ಆರ್.ಸಿ. ನವೀಕರಣ ಕೊಠಡಿ	1	1	–	–
	ನಿಪ್ಪಾಣಿ	ಹೆಚ್ಚುವರಿ ಕೊಠಡಿ	10	10	–	–
		ಮು.ಶಿ. ಕೊಠಡಿ	10	10	–	–
		ಬಿ.ಆರ್.ಸಿ. ನವೀಕರಣ ಕೊಠಡಿ	1	1	–	–
ಒಟ್ಟು			71	71	–	–
2012–13	ಚಿಕ್ಕೋಡಿ	ಹೆಚ್ಚುವರಿ ಕೊಠಡಿ (ಗ್ರಾಮೀಣ)	36	16	20	–
		ಹೆಚ್ಚುವರಿ ಕೊಠಡಿ (ನಗರ)	3	–	3	–
		ಹೆಚ್ಚುವರಿ ಕೊಠಡಿ (8ನೇ ತರಗತಿ)	9	6	3	–
		ಮು.ಶಿ. ಕೊಠಡಿ	1	–	1	–
	ನಿಪ್ಪಾಣಿ	ಹೆಚ್ಚುವರಿ ಕೊಠಡಿ (ಗ್ರಾಮೀಣ)	12	9	2	1
		ಹೆಚ್ಚುವರಿ ಕೊಠಡಿ (ನಗರ)	3	3	–	–
		ಹೆಚ್ಚುವರಿ ಕೊಠಡಿ (8ನೇ ತರಗತಿ)	12	12	–	–
ಒಟ್ಟು			76	46	29	1

ಚಿಕ್ಕೋಡಿ ತಾಲ್ಲೂಕಿಗೆ 2013–14ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ಯಾವುದೇ ಕಾಮಗಾರಿಗಳು ಮಂಜೂರಾಗಿರುವುದಿಲ್ಲ.

ಚಿಕ್ಕೋಡಿ ತಾಲ್ಲೂಕಿಗೆ ಕಳೆದ 3 ವರ್ಷಗಳಲ್ಲಿ ಮಂಜೂರಾಗಿರುವ ಶಾಲಾವಾರು ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ.

ಆ) 2012–13ನೇ ಸಾಲಿನಲ್ಲಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಕಾರದಾಗ ಶಾಲೆಗೆ ಒಂದು ಹೆಚ್ಚುವರಿ ಕೊಠಡಿ ಮಂಜೂರಾಗಿದ್ದು, ನಿವೇಶನದ ಲಭ್ಯತೆ ಇಲ್ಲದೆ ಕಾರಣ ಸದರಿ ಕೊಠಡಿಯನ್ನು ಕನ್ನಡ ಬಾಲಕರ ಶಾಲೆ ಬೋರಗಾವ್‌ಗೆ ಸ್ಥಳಾಂತರಿಸಲು ಕ್ರಮವಹಿಸಲಾಗಿದೆ.

ಇ) 2012–13ನೇ ಸಾಲಿನವರೆಗಗೆ ಮಂಜೂರಾಗಿರುವ ಎಲ್ಲಾ ಕಾಮಗಾರಿಗಳನ್ನು 31.12.2014 ರೊಳಗೆ ಪೂರ್ಣಗೊಳಿಸಲು ಸೂಚಿಸಲಾಗಿದೆ.

ಈ) ಸರ್ವ ಶಿಕ್ಷಣ ಅಭಿಯಾನ ಯೋಜನೆಯನ್ನು ಮುಂಬರುವ ಶೈಕ್ಷಣಿಕ ವರ್ಷಕ್ಕೆ ಮುಂದುವರಿಸುವ ಬಗ್ಗೆ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು ನಿರ್ಧರಿಸುತ್ತದೆ.

ಉ) ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಚಿಕ್ಕೋಡಿ ತಾಲ್ಲೂಕಿನ ಒಟ್ಟು 75 ಶಾಲೆಗಳಿಗೆ ಅಗತ್ಯವಾದ 114 ಹೆಚ್ಚುವರಿ ಕೊಠಡಿಗಳಿಗೆ ಜಿಲ್ಲೆಯಿಂದ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇದರಲ್ಲಿ 09 ಹೆಚ್ಚುವರಿ ಕೊಠಡಿಗಳು ಕೇಂದ್ರ ಸರ್ಕಾರದಿಂದ ಮಂಜೂರಾಗಿದ್ದು, ವಿವರವನ್ನು ಈ ಕೆಳಕಂಡಂತೆ ಒದಗಿಸಲಾಗಿದೆ.

CHIKKODI – Approved Additional Class Rooms for the Year 2014-15

School Code	School Name	Recommended/ Approved
29300505501	K.H.P.S. Jaganur	2
29300506409	H.H.P.G.S. Kerur	5
29300507405	K.L.P.G.S. Kabburu	1
29300513501	K.H.P.S. Walki	1